**ದಿನಾಂಕಃ 7-11-2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**
ಮುಂದುವರೆದ ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ವಕೀಲರಿಂದಃ-

**ನಾನು ನನ್ನ ಮುಖ್ಯ ವಿಚಾರಣೆಗೆ ಪ್ರಮಾಣಪತ್ರ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲ ಅಂಶಗಳೂ ಸತ್ಯವಾಗಿರುತ್ತವೆಂದು ಹಾಗೂ ಅದರಲ್ಲಿ ನನ್ನ ಸಹಿ ಇರುತ್ತದೆಂದು ಪ್ರಮಾಣೀಕರಿಸುತ್ತೇನೆ.**

**ಈ ಕೇಸಿನಲ್ಲಿ ನಾನು ಕೆಲವು ಅಗತ್ಯ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ನೋಡುತ್ತಿರುತ್ತೇನೆ.**

1. ಕೇಸ್ ಶೀಟ್ ನ್ನು ನಿಪಿ-11 ಎಂದು
2. 2 ಎಕ್ಸ್ ರೇ ಗಳನ್ನು ನಿಪಿ-12 ಎಂದು ಗುರುತಿಸಲಾಯಿತು.

ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಎ ಬಿ ಎಸ್ **ವಕೀಲರಿಂದಃ-**

ಈ ಕೇಸಿನಲ್ಲಿ ಎಂ ಎಲ್ ಸಿ ಮಾಡಿಲ್ಲ. ಆದರೆ ಅಪಘಾತದ ವಿವರಗಳನ್ನು ಕೇಸ್ ಶೀಟ್ ನಲ್ಲಿ ನಮೂದು ಮಾಡಲಾಗಿದೆ. ಅಪಘಾತದ ಸಂಪೂರ್ಣ ವಿವರಗಳನ್ನು ಕೇಸ್ ಶೀಟ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರರು ನಮ್ಮ ಆಸ್ಪತ್ರೆಗೆ ಬಂದಾಗ ಪ್ರಜ್ಞಾಸ್ಥಿತಿಯಲ್ಲಿದ್ದರು. ಆದ್ದರಿಂದ ಅಪಘಾತದ ಹಿನ್ನಲೆ ಮತ್ತು ಅಪಘಾತಪಡಿಸಿದ ವಾಹನದ ವಿವರಗಳನ್ನು ಪಡೆದುಕೊಂಡು ನಮೂದಿಸಲು ತೊಂದರೆ ಇರಲಿಲ್ಲ. ಅರ್ಜಿದಾರರು ಅಪಘಾತವಾದ 4 ನೇ ದಿನಕ್ಕೆ ನಮ್ಮ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅರ್ಜಿದಾರರು ದಿಃ 23-9-2018 ರಿಂದ ದಿಃ 27-9-2018 ರ ವರೆಗೆ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಆಲೂರು ಸರ್ಕಾರಿ ಆಸ್ಪತ್ರೆಯ ಬಿಡುಗಡೆ ಸಾರಾಂಶವನ್ನು ನೋಡಿರುತ್ತೇನೆ. ದಿಃ 23-9-2018 ರಂದು ಆಲೂರು ಸರ್ಕಾರಿ ಆಸ್ಪತ್ರೆಯಲ್ಲಿ ತೆಗೆದ ಎಕ್ಸ ರೇ ಯನ್ನು ನಾನು ನೋಡಿಲ್ಲ. ಬೆನ್ನುಮೂಳೆಗೆ ಆದ ಗಾಯ ಎಕ್ಸರೇಯಲ್ಲಿ ಕಾಣುವುದಿಲ್ಲ ಎಂದರೆ ಸರಿಯಲ್ಲ. ಎಂ ಆರ್ ಐ ಸ್ಕ್ಯಾನ್ ಮಾಡಿಸಿದ್ದಲ್ಲಿ ನಿಜಾಂಶ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಎಂ ಆರ್ ಐ ಸ್ಕ್ಯಾನ್ ನಲ್ಲಿ ನರ ದೌರ್ಬಲ್ಯಗಳು ಕಂಡುಬರುತ್ತವೆ ಮೂಳೆ

ಮುರಿತ ಗೊತ್ತಾಗುವುದಿಲ್ಲ, ಎಕ್ಸ ರೇ ಮೂಲಕವೇ ಖಚಿತಪಡಿಸಿಕೊಳ್ಳಬೇಕು ಎನ್ನುತ್ತಾರೆ. ಎಕ್ಸ ರೇ ಆಧಾರದ ಮೇರೆಗೆ ರೆಡಿಯೋಲೆಜಿ ವರದಿಯನ್ನು ಪಡೆದುಕೊಂಡಿಲ್ಲ. ಅರ್ಜಿದಾರರಿಗೆ ಆದ ಗಾಯಗಳು ಗುಣಮುಖವಾಗಿ ಮೊದಲಿನಂತೆ ಚನ್ನಾಗಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ದೈಹಿಕ ತೊಂದರೆಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೇಂದ್ರ ಸರ್ಕಾರದ ಸುತ್ತೋಲೆ ಪ್ರಕಾರ ಅರ್ಜಿದಾರರ ಅಂಗನ್ಯೂನತೆ ನಿರ್ಧರಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಉತ್ರೇಕ್ಷೆಯಿಂದ ಅಂಗನ್ಯೂನತೆಯನ್ನು ನಿರ್ಧರಿಸಿರುತ್ತೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ.

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹಾಸನ.**